ಆ) ಈ ರೋಗದ ಹತೋಟಿಗೆ ರಾಷ್ಟ್ರೀಯ ಆನೇಕಾಲು ರೋಗ ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆನೆಕಾಲು ರೋಗ ನಿಯಂತ್ರಣ ಘಟಕಗಳನ್ನು ಮತ್ತು ರಾತ್ರಿ ಚಿಕಿತ್ಸಾಲಯಗಳನ್ನು ಮಂಗಳೂರು ಮತ್ತು ಉಡುಪಿ ಪಟ್ಟಣಗಳಲ್ಲಿ ಸ್ಥಾಪಿಸಲಾಗಿದ್ದು ಈ ರೋಗದ ನಿರ್ಯಂತ್ರಣ ಕಾರ್ಯವನ್ನು ಕೈಗೊಳ್ಳಲಾಗಿದೆ. ಫೈಲೇರಿಯಾ ನಿಯಂತ್ರಣ ಘಟಕಗಳು ಮುಖ್ಯವಾಗಿ ಈ ರೋಗ ಹರಡುವ ಕ್ಯೂಲೆಕ್ಸ್ ಜಾತಿಯ ಸೊಳ್ಳೆ ನಿಯಂತ್ರಣ ಕಾರ್ಯವನ್ನು ನಗರ ಸಭೆಯ ಮುಖಾಂತರ ಕೈಗೊಳ್ಳಲಾಗುತ್ತಿದೆ. ಸೊಳ್ಳೆ ಉತ್ಪತ್ತಿಯಾಗುವ ನಿಂತ ಕೊಳಚೆ ನೀರು, ಚರಂಡಿಯ ನೀರನ್ನು ಸರಾಗವಾಗಿ ಹರಿಯಲು ಸಣ್ಣ ಕಾಮಗಾರಿ ಕೆಲಸವನ್ನು ಕೈಗೊಳ್ಳುವುದು ಮತ್ತು ವಾರಕ್ಕೊಮ್ಮೆ ಸೊಳ್ಳೆ ಉತ್ಪತ್ತಿ ಸ್ಥಳಗಳಿಗೆ ಕೀಟನಾಶಕಗಳನ್ನು ಸಿಂಪಡಿಸುವುದು. ಫೈಲೇರಿಯಾ ಚಿಕಿತ್ಸಾಲಯಗಳ ಮೂಲಕ ಜನಸಮುದಾಯದಲ್ಲಿ ಈ ರೋಗವನ್ನು ಪತ್ತೆ ಹಚ್ಚುವ ಸಲುವಾಗಿ ರಾತ್ರಿ ವೇಳೆಯಲ್ಲಿ ರಕ್ತ ಪರೀಕ್ಷಾ ಕಾರ್ಯವನ್ನು ಕೈಗೊಂಡು ಈ ರೋಗದ ಪ್ರಕರಣಗಳಿಗೆ ಡೈ ಇಥೈಲ್ ಕಾರ್ಬಾಯಿಜೈನ್ ಮಾತ್ರೆಗಳಿಂದ ಸೂಕ್ತ ಚಿಕಿತ್ಸೆಯನ್ನು ನೀಡಲಾಗುತ್ತಿದೆ.

ಜನರಲ್ಲಿ, ಈ ರೋಗದ ಅರಿವನ್ನುಮೂಡಿಸಿ, ಮನೆಯ ಆವರಣ ಮತ್ತು ಸುತ್ತ ಮುತ್ತ ನೀರು ನಿಲ್ಲದಂತೆ ತಡೆಗಟ್ಟುವುದು ಮತ್ತು ಆಗಾಗ್ಗೆ ರಾತ್ರಿ ವೇಳೆಯಲ್ಲಿ ರಕ್ತ ತಪಾಸಣೆಯನ್ನು ಮಾಡಿಸಿಕೊಂಡು ಈ ರೋಗವನ್ನು ತಡೆಗಟ್ಟಲು ಆರೋಗ್ಯ ಶಿಕ್ಷಣವನ್ನು ನೀಡಲಾಗುತ್ತಿದೆ.

೨-೩೦ ಪಿ. ಎಂ.

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ. ಕರಾವಳಿಯಲ್ಲಿ ಉಲ್ಲಾಳ, ಮಂಜೇಶ್ವರ, ಬ್ರಹ್ಮಾವರ ಹಾಗೂ ಉಡುಪಿಗಳಲ್ಲಿ ಆನೇಕಾಲು ರೋಗ ಬಹಳ ಜಾಸ್ತಿ ಜನರಿಗೆ ಇದೆ. ೧೯೮೭-೮೮ನೇ ಇಸವಿಗಳ ಅಂಕಿಅಂಶಗಳ ಪ್ರಕಾರವೇ ಈ ರೋಗ ಪ್ರತಿವರ್ಷವೂ ಜಾಸ್ತಿಯಾಗುತ್ತಾ ಹೋಗಿದೆ. ಆನೇಕಾಲು ರೋಗ ನಿಯಂತ್ರಣ ಘಟಕ ಇದೆ. ಸೊಳ್ಳೆ ನಿಯಂತ್ರಣ ಮಾಡತಕ್ಕ ಘಟಕ ಇದೆ ಎಂದು ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಆನೆಕಾಲು ರೋಗ ನಿಯಂತ್ರಣ ಘಟಕ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಇದು ಸರಿಯಾಗಿ ಕೆಲಸ ಮಾಡುತ್ತಿದ್ದರೆ ಈ ರೋಗವನ್ನು ನಿಯಂತ್ರಿಸ ಬಹುದಾಗಿತ್ತು. ಆನೇಕಾಲು ರೋಗ ಬಂದು ಆಸ್ಪತ್ರೆಗೆ ಬಂದು ದಾಖಲಾಗುವವರಿದ್ದಾರೆಂದು ವೈದ್ಯರುಗಳೇ ಹೇಳುತ್ತಿದ್ದಾರೆ. ಆನೇಕಾಲು ರೋಗ ನಿಯಂತ್ರಣ ಘಟಕ ಮತ್ತು ಸೊಳ್ಳೆ ನಿಯಂತ್ರಣ ಘಟಕಗಳು ಚುರುಕಾಗಿ ಕೆಲಸ ಮಾಡುವಂತೆ ಸೂಕ್ತ ಆದೇಶ ಕೊಡುತ್ತೀರಾ?

ಶ್ರೀಮತಿ ಮನೋರಮಾ ವಂಧ್ಯರಾಜ್.—ಮಾನ್ಯ ಸದಸ್ಯರ ಸಲಹೆ ಉತ್ತಮವಾಗಿದೆ. ಈ ದಿಸೆಯಲ್ಲಿ ಖಂಡಿತವಾಗಿ ಕ್ರಮ ತೆಗೆದುಕೊಳ್ಳುತ್ತೇನೆ.

(ಶ್ರೀ ಪಿ. ಸಿ. ಸಿದ್ದನಗೌಡ, ಗೈರು ಹಾಜರಿ)

ಚಿಂತಾಮಣಿಯಲ್ಲಿರುವ ಟಿ. ಎ. ಪಿ. ಸಿ. ಎಂ. ಸಿ.

೧೬೧. **ಶ್ರೀ ಚೌಡಾರೆಡ್ಡಿ (ಚಿಂತಾಮಣಿ).**—ಮಾನ್ಯ ಆರೋಗ್ಯ, ಕುಟುಂಬ ಕಲ್ಯಾಣ ಹಾಗೂ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚಿಂತಾಮಣಿ ತಾಲ್ಲೂಕು ವ್ಯವಸಾಯ ಉತ್ಪನ್ನ ಮಾರಾಟ ಸಹಕಾರ ಸಂಘದ ಹೊಸ ಸಮಿತಿಯು ಯಾವಾಗ ಅಸ್ತಿತ್ವಕ್ಕೆ ಬಂತು ? ಮತ್ತು ಇದರ ಒಟ್ಟು ಸದಸ್ಯರ ಸಂಖ್ಯೆ ಎಷ್ಟು ?

ಆ) ಸಂಘದ ಉಪ ನಿಯಮದ ಪ್ರಕಾರ ಸಮಿತಿಯಲ್ಲಿ ಕೋರಂಗೆ ಬೇಕಾದ ಸದಸ್ಯರುಗಳು ಇಲ್ಲದಿರುವುದು ನಿಜವೆ ?

ಇ) ಕೋರಂ ಇಲ್ಲದೆ ನಡೆದಿರುವ ಆಡಳಿತ ಮಂಡಳಿಯ ಸಭೆಗಳೆಷ್ಟು ?

ಈ) ಸಂಘವು ೧೯೮೭-೮೮ ಮತ್ತು ೧೯೮೮-೮೯ನೇ ಸಾಲುಗಳ ಹಣಕಾಸಿನ ವಿವರ.

ಉ) ಸಂಘದ ೧೯೮೭-೮೮ ಮತ್ತು ೧೯೮೮-೮೯ನೇ ಸಾಲುಗಳಲ್ಲಿ ಸಿಬ್ಬಂದಿ ಮತ್ತು ಇತರೆ ವೆಚ್ಚ.

ಶ್ರೀಮತಿ ಪಂನೋರಮಾ ಮಧ್ವರಾಜ್ (ಆರೋಗ್ಯ, ಕುಟುಂಬ ಕಲ್ಯಾಣ ಹಾಗೂ ಸಹಕಾರ ಮಂತ್ರಿಗಳು).—

ಅ) ದಿನಾಂಕ. ೨೩–೫–೧೯೮೮. ಒಟ್ಟು ಸದಸ್ಯರ ಸಂಖ್ಯೆ. ೧೨.

ಆ) ಇಲ್ಲ.

ಇ) ಯಾವುದೂ ಇಲ್ಲ.

ಈ)

	೧೯೮೭–೮೮	೧೯೮೮–೮೯
	೧,೬೦,೧೦,೦೩೩–೦೦	೮೩,೮೦,೨೦೬–೦೦

ಉ)

ಸಿಬ್ಬಂದಿ	೧೯೮೭–೮೮	೧೯೮೮–೮೯
ವೆಚ್ಚ	೨,೩೦,೫೨೫–೦೦	೨,೪೮,೧೮೬–೦೦
ಇತರೆ ವೆಚ್ಚ	೩,೩೯,೭೯೫–೦೦	೧,೭೩,೧೭೭–೦೦

ಶ್ರೀಮತಿ ಪಂನೋರಮಾ ಮಧ್ವರಾಜ್.—ವಂಊರನೇ ಪ್ರಶ್ನೆಗೆ ಸಂಬಂಧಪಟ್ಟಂತೆ ಉತ್ತರವನ್ನು ಸ್ವಲ್ಪ ತಿದ್ದುಪಡಿ ಮಾಡಿಕೊಳ್ಳಬೇಕಾಗಿದೆ. ೨ ಮೀಟಿಂಗ್ ಆಗಿದೆ.

ಶ್ರೀ ಚೌಡಾರೆಡ್ಡಿ.—ಸನ್ಮಾನ್ಯ ಅಧ್ಯಕ್ಷರೆ, ಚಿಂತಾಮಣಿ ತಾಲ್ಲೂಕಿಂ ಟಿ. ಎ. ಪಿ. ಸಿ. ಎಂ. ಸಮಿತಿಯನ್ನು ೬–೯–೧೯೮೮ರಲ್ಲಿ ಅವ್ಯವಹಾರ ನಡೆದಿದೆ ಎಂದಂ ಸರ್ಕಾರದವರಂ ಪರಿಶೀಲನೆ ಮಾಡಿ ಸೂಪರ್‌ಸೀಡ್ ಮಾಡಲಾಗಿತ್ತು. ಸೂಪರ್ ಸೀಡ್ ಮಾಡಿ ೧೫ ದಿವಸದೊಳಗೆ ಮತ್ತೆ ಅದೇ ಕಮಿಟಿಯವರು ಕೆಲಸ ನಿರ್ವಹಿಸುವಂತೆ ಆದೇಶ ಕೊಟ್ಟಿರುತ್ತಾರೆ. ಈ ವಿಚಾರದಲ್ಲಿ ನಾನು ರಾಜ್ಯಪಾಲರಿಗೆ, ಮಂತ್ರಿಗಳಿಗೆ ಹಾಗೂ ಮುಖ್ಯ ಮಂತ್ರಿಗಳಿಗೆ ಪತ್ರ ಬರೆದರೂ ಅವರಿಂದ ಉತ್ತರ ಬಂದಿಲ್ಲ. ಕೋರಂ ಕೂಡ ಇಲ್ಲದೆ ಮೀಟಿಂಗ್ ನಡೆಸುತ್ತಾರೆ, ಜೊತೆಗೆ ಬಹಳ ಬೆಲೆ ಬಾಳುವ ಕಟ್ಟಡ ಗಳನ್ನು ಬೇರೆಯವರಿಗೆ ಕೊಡುತ್ತಿದ್ದಾರೆ. ಕೂಡಲೇ ಸರ್ಕಾರ ಈ ಸಮಿತಿಯನ್ನು ಸೂಪರ್ ಸೀಡ್ ಮಾಡುವುದೇ ?

ಶ್ರೀಮತಿ ಪಂನೋರಮಾ ಮಧ್ವರಾಜ್.—ಸೂಪರ್ ಸೀಡ್ ಮಾಡಿಸುತ್ತೇನೆ.

ಸಹಕಾರ ಸಂಘಗಳ ಸಾಲ ಮನ್ನಾ ಕುರಿತು

೩೭೪. ಶ್ರೀ ದಿವಟರ್ ಮಲ್ಲಿಕಾರ್ಜುನ ಬಸಪ್ಪ (ಕೊಪ್ಪಳ).—ಮಾನ್ಯ ಆರೋಗ್ಯ, ಕುಟುಂಬ ಕಲ್ಯಾಣ ಹಾಗೂ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸರ್ಕಾರ ೧೯೮೩–೮೪ ಹಾಗೂ ೧೯೮೭–೮೮ರಲ್ಲಿ ದೀರ್ಘಾವಧಿ ಹಾಗು ಅಲ್ಪಾವಧಿ ಸಾಲಗಳ ಮೇಲೆ ನೀಡಿದ ಬಡ್ಡಿ ರಿಯಾಯಿತಿಯ ಮೊತ್ತವೆಷ್ಟು ?

ಆ) ಸರ್ಕಾರದವರಂ ಹಣವನ್ನು ಆಯಾ ಸಹಕಾರ ಸಂಘಗಳಿಗೆ ಪಾವತಿ ಮಾಡಿರುವರೆ ? ಹಾಗಿದ್ದಲ್ಲಿ ಅವರ ಮೊತ್ತವೆಷ್ಟು ?

ಇ) ನಿಗದಿತ ಅವಧಿಯಲ್ಲಿ ಸಾಲ ಮರುಪಾವತಿ ಮಾಡುವ ರೈತರಿಗೆ ಪ್ರತಿಶತ ೭ ರೂ.ಗಳ ಬಡ್ಡಿ ರಿಯಾಯಿತಿ ಸೌಲಭ್ಯವನ್ನು ಸರ್ಕಾರದವರು ಮುಂದುವರೆಸುವರೆ ?